ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 05-04-1970

***ಸರ್ವ ಪಾಯಿಂಟ್ ಗಳ (ಮಹಾವಾಕ್ಯ) ಸಾರ (ಪಾಯಿಂಟ್) ಬಿಂದು ಆಗಿ***

(सर्व पॉइंट का सार पॉइंट (बिन्दी) बनो)

ಎಲ್ಲರೂ ಕೇಳಲು ಇಚ್ಛಿಸುವಿರೋ ಅಥವಾ ಸಂಪೂರ್ಣರಾಗಲು ಬಯಸುತ್ತೀರೋ? ಸಂಪೂರ್ಣರಾದ ಮೇಲೆ ಕೇಳುವುದು ಇರತ್ತದೆಯೇ? ಮೊದಲಿದೆ ಕೇಳುವುದು ನಂತರ ಸಂಪೂರ್ಣವಾಗುವುದು. ಇಷ್ಟೆಲ್ಲಾ ಜ್ಞಾನದ ವಿಚಾರಗಳನ್ನು ಕೇಳಿರುವಿರಿ, ಏನಾಗಲು ಈ ಎಲ್ಲ ಜ್ಞಾನದ ಬಿಂದುಗಳಿವೆ? ಕೇಳಿದಂತಹ ಎಲ್ಲಾ ಬಿಂದುಗಳ ಸ್ವರೂಪವೇನಾಗಬೇಕು? ಎಲ್ಲಾ ಬಿಂದುಗಳ ಸಾರ ಅಥವಾ ಸ್ವರೂಪ ಬಿಂದುವಾಗಬೇಕು. ಎಲ್ಲಾ ಬಿಂದುಗಳ ಸಾರವೂ ಬಿಂದುವಿನಲ್ಲಿ ಬರುತ್ತದೆಯಾದರೆ ಬಿಂದುವಾಗಬೇಕು. ಬಿಂದು ಅತಿ ಸೂಕ್ಷ್ಮವಾಗಿದೆ, ಅದರಲ್ಲಿ ಎಲ್ಲವೂ ಸಮಾವೇಶವಾಗಿದೆ. ಈ ಸಮಯ ಮುಖ್ಯ ಪುರುಷಾರ್ಥವೇನು? ಈಗಿನ ಪುರುಷಾರ್ಥವಾಗಿದೆ ವಿಸ್ತಾರವನ್ನು ಸಮಾವೇಶಗೊಳಿಸುವುದು. ಯಾರಿಗೆ ವಿಸ್ತಾರವನ್ನು ಅಳವಡಿಸಿಕೊಳ್ಳುವ ರೀತಿ ಗೊತ್ತಿದೆಯೋ ಅವರೇ ಬಾಪ್ ದಾದಾರ ಸಮಾನವಾಗುತ್ತಾರೆ. ಮೊದಲೂ ಸಹ ಸಮಾವೇಶಗೊಳಿಸುವುದು ಮತ್ತು ಸಂಕ್ಷಿಪ್ತಗೊಳಿಸುವುದರ ಬಗ್ಗೆ ಹೇಳಿದ್ದೆವು. ಯಾರಿಗೆ ಸಂಕ್ಷಿಪ್ತಗೊಳಿಸುವುದು ಬರುತ್ತದೆಯೋ ಅವರಿಗೆ ಸಮಾವೇಶಗೊಳಿಸುವುದೂ ಬರುತ್ತದೆ. ಬೀಜದಲ್ಲಿ ಯಾವ ಶಕ್ತಿಯಿದೆ? ವೃಕ್ಷದ ವಿಸ್ತಾರವನ್ನು ತನ್ನಲ್ಲಿ ಸಮಾವೇಶಗೊಳಿಸುವ ಶಕ್ತಿ ಇದೆ. ಹಾಗಾದರೆ ಈಗ ಯಾವ ಪುರುಷಾರ್ಥ ಮಾಡಬೇಕು? ಬೀಜ ರೂಪ ಸ್ಥಿತಿಯಲ್ಲಿ ಸ್ಥಿತರಾಗುವ ಅರ್ಥಾತ್ ತಮ್ಮ ವಿಸ್ತಾರವನ್ನು ಸಮಾವೇಶಗೊಳಿಸುವ ಪುರುಷಾರ್ಥ ಮಾಡಬೇಕು. ಆದ್ದರಿಂದ ಈಗ ಇದನ್ನು ಪರಿಶೀಲನೆ ಮಾಡಿ. ವಿಸ್ತಾರ ಮಾಡುವುದು ಸಹಜವಾಗಿದೆ ಆದರೆ ವಿಸ್ತಾರವನ್ನು ಸಮಾವೇಶಗೊಳಿಸುವುದು ಸರಳವಿದೆಯೇ? ಇತ್ತೀಚೆಗೆ ವಿಜ್ಞಾನಿಗಳು ಸಹ ವಿಸ್ತಾರವನ್ನು ಸಮಾವೇಶಗೊಳಿಸುವ ಪುರುಷಾರ್ಥವನ್ನೇ ಮಾಡುತ್ತಾರೆ. ವಿಜ್ಞಾನದ ಶಕ್ತಿಯವರೂ ಶಾಂತಿಯ ಶಕ್ತಿಯವರ ಅನುಸರಿಸುತ್ತಾರೆ. ಶಾಂತಿಯ ಶಕ್ತಿಯ ಸೇನೆ ಹೇಗೆ ಪುರುಷಾರ್ಥ ಮಾಡುತ್ತದೆಯೋ, ಹಾಗೆಯೇ ಅವರೂ ಪುರುಷಾರ್ಥ ಮಾಡುತ್ತಾರೆ. ಶಾಂತಿಯ ಶಕ್ತಿಸೇನೆ ಮೊದಲು ಅವಿಷ್ಕಾರ ಮಾಡುತ್ತದೆ ನಂತರ ವಿಜ್ಞಾನ ತನ್ನ ರೂಪದ ಅವಿಷ್ಕಾರ ಮಾಡುತ್ತದೆ. ಹೇಗೆ ಇಲ್ಲಿ ರಿಫೈನ್ ಆಗುತ್ತಾರೆಯೋ ಹಾಗೆ ವಿಜ್ಞಾನವೂ ರಿಫೈನ್ ಆಗುತ್ತದೆ. ಯಾವ ಮಾತುಗಳು ಮೊದಲು ಅವರಿಗೆ ಅಸಂಭವ ಎನಿಸುತ್ತಿದ್ದವೋ ಅವು ಈಗ ಸಂಭವವಾಗುತ್ತಿವೆ. ಅದೇ ರೀತಿ ಇಲ್ಲಿಯೂ ಅಸಂಭವ ಮಾತುಗಳು ಸರಳ ಮತ್ತು ಸಂಭವವಾಗುತ್ತಿವೆ. ಈಗ ಶಬ್ದದಲ್ಲಿ ಬರುವುದು ಎಷ್ಟು ಸಹಜವೋ ಅಷ್ಟು ಶಬ್ದದಿಂದ ದೂರವಾಗುವ ಮುಖ್ಯ ಪುರುಷಾರ್ಥವನ್ನೇ ಮಾಡಬೇಕಾಗಿದೆ. ಇದನ್ನೇ ಸಂಪೂರ್ಣ ಸ್ಥಿತಿಯ ಸಮೀಪದ ಸ್ಥಿತಿ ಎಂದು ಹೇಳಲಾಗುತ್ತದೆ.

ಇದು ಯಾವ ಗುಂಪಾಗಿದೆ? ಈ ಗುಂಪಿನ ಪ್ರತಿಯೊಂದು ಮೂರ್ತಿಯಲ್ಲಿ ತಮ್ಮದೇ ಆದ ವಿಶೇಷತೆಗಳಿವೆ. ವಿಶೇಷತೆಗಳ ಕಾರಣದಿಂದಲೇ ಸೃಷ್ಟಿಯಲ್ಲಿ ವಿಶೇಷ ಆತ್ಮರಾಗಿದ್ದೀರಿ, ವಿಶೇಷ ಆತ್ಮರಂತೂ ಆಗಿದ್ದೀರಿ. ಈಗ ಏನಾಗಬೇಕು? ಶ್ರೇಷ್ಠವಾಗಬೇಕು. ಶ್ರೇಷ್ಠರಾಗಲು ಭಟ್ಟಿಯಲ್ಲಿ ಏನನ್ನು ಮಾಡುವಿರಿ? ಈ ಗುಂಪಿನಲ್ಲಿ ಯಾರಲ್ಲಿಯೂ ಇರದಂತಹ ಒಂದು ವಿಶೇಷತೆಯಿದೆ. ಆ ಒಂದು ವಿಶೇಷತೆ ಯಾವುದು? ತಮ್ಮ ವಿಶೇಷತೆಯನ್ನು ತಿಳಿದಿದ್ದೀರಾ? ಈ ಗುಂಪಿನಲ್ಲಿ ಪುರುಷಾರ್ಥದ ಮಟ್ಟದಲ್ಲಿ ಪರಸ್ಪರರು ಸಮೀಪವಾಗಿದ್ದೀರಿ ಎಂಬ ಇದೇ ವಿಶೇಷತೆಯನ್ನು ನೋಡುತ್ತಿದ್ದೇವೆ. ಪ್ರತಿಯೊಬ್ಬರ ಮನದಲ್ಲಿ ಏನಾದರೂ ಮಾಡಬೇಕೆಂಬ ಉತ್ಸಾಹವಿದೆ. ಆದ್ದರಿಂದ ಈ ಗುಂಪಿಗೆ ಬಾಪ್ ದಾದಾ "ಭಾವೀ ಮತ್ತು ಭರವಸೆಯುಳ್ಳ ಗುಂಪು" ಎಂಬ ಹೆಸರನ್ನು ಕೊಡುತ್ತಿದ್ದಾರೆ ಮತ್ತು ಇದೇ ಸೃಷ್ಟಿಯ ಮುಂದೆ ತಮ್ಮ ನಿಜ ರೂಪವನ್ನು ಪ್ರತ್ಯಕ್ಷ ಮಾಡಿ ತೋರಿಸುವ ಗುಂಪಾಗಿದೆ. ಮೈದಾನದಲ್ಲಿ ನಿಂತಂತಹ ಸೇನೆ ಇದಾಗಿದೆ. ತಾವೆಲ್ಲರೂ ಬೆನ್ನೆಲುಬಾಗಿದ್ದೀರಿ. ಆದ್ದರಿಂದ ಬಾಪ್ ದಾದಾರ ಕರ್ತವ್ಯವನ್ನು ಪ್ರತ್ಯಕ್ಷಗೊಳಿಸುವ ಭುಜಗಳಲ್ಲಿ ಯಾವ ಅಲಂಕಾರಗಳಿರುತ್ತವೆ ಎಂದು ತಿಳಿದಿರುವಿರಾ? ಬಾಪ್ ದಾದಾರ ಭುಜಗಳು ಅಲಂಕಾರಧಾರಿಗಳಾಗಿವೆ.

ಹಾಗಾದರೆ ನಾವು ಅಲಂಕಾರಿ ಭುಜಗಳಾಗಿದ್ದೇವೆಯೇ ಎಂದು ತಮ್ಮೊಂದಿಗೆ ತಾವೇ ಕೇಳಿಕೊಳ್ಳಿ ಯಾವ - ಯಾವ ಅಲಂಕಾರಗಳನ್ನು ಧರಿಸಿ ಮೈದಾನದಲ್ಲಿ ಉಪಸ್ಥಿತರಿರುವಿರಿ? ಎಲ್ಲಾ ಅಲಂಕಾರಗಳನ್ನು ತಿಳಿದಿರುವಿರಲ್ಲವೇ? ಅಲಂಕರಿತ ಭುಜಗಳಾಗಿದ್ದೀರಲ್ಲವೇ? ಅಲಂಕಾರಧಾರಿ ಶಕ್ತಿಗಳೇ ಬಾಪ್ ದಾದಾರ, ಪ್ರತ್ಯಕ್ಷತೆ ಮಾಡುವರು. ಶಕ್ತಿಯರ ಭುಜಗಳನ್ನು ಎಂದೂ ಖಾಲಿ ತೋರಿಸುವುದಿಲ್ಲ. ಅಲಂಕಾರ ಕಾಯಂ ಆಗಿದ್ದರೆ ಗರ್ಜನೆಯಾಗುವುದು. ಬಾಪ್ ದಾದಾ ಇಂದು ಏನನ್ನು ನೋಡುತ್ತಿದ್ದರು? ಒಂದೊಂದು ಭುಜದ ಅಲಂಕಾರ ಮತ್ತು ಗತಿಯನ್ನು. ಈ ಭಟ್ಟಿಯಲ್ಲಿ ಏನು ಮಾಡುವಿರಿ? ಶಕ್ತಿಯರ ಮುಖ್ಯ ಗುಣ ಯಾವುದು?

ಶಕ್ತಿಯ ಮುಖ್ಯ ಗುಣವಾದ ನಿರ್ಭಯತೆ ಮತ್ತು ವಿಸ್ತಾರವನ್ನು ಒಂದು ಕ್ಷಣದಲ್ಲಿ ಸಮಾವೇಶಗೊಳಿಸುವ ಯುಕ್ತಿಯನ್ನು ಈ ಗುಂಪು ಕಲಿಯಬೇಕು. ಏಕತೆ ಮತ್ತು ಏಕರಸ. ಅನೇಕ ಸಂಸ್ಕಾರಗಳನ್ನು ಒಂದು ಸಂಸ್ಕಾರವಾಗಿ ಹೇಗೆ ಮಾಡುವುದು ಎಂದು ಈ ಭಟ್ಟಿಯಲ್ಲಿ ಕಲಿಸಬೇಕು. ಕಡಿಮೆ ಸಮಯ ಮತ್ತು ಕಡಿಮೆ ಮಾತು, ಆದರೆ ಸಫಲತೆ ಹೆಚ್ಚಾಗಿರಬೇಕು. ಈ ವಿಧಿಯನ್ನು ಸಹ ಕಲಿಯಬೇಕು. ಕೇಳಬೇಕು ಮತ್ತು ಸ್ವರೂಪವಾಗಬೇಕು. ಕೇಳುವುದು ಹೆಚ್ಚು ಮತ್ತು ಸ್ವರೂಪ ಕಡಿಮೆಯಾಗಬಾರದು, ಕೇಳುತ್ತಿರಿ ಮತ್ತು ಆಗುತ್ತಿರಿ. ಈಗ ಸಾಕ್ಷಾತ್ಕಾರ ಮೂರ್ತಿಗಳಾಗಿ ಹೋಗಿ, ಮಾತಿನ ಮೂರ್ತಿಗಳಾಗಿ ಅಲ್ಲ. ಯಾರೇ ತಮ್ಮನ್ನು ನೋಡಿದಾಗ ಆಕಾರಿ ಮತ್ತು ಅಲಂಕಾರಿಯಾಗಿ ನೋಡಲಿ. ಅರಿವು ಬೇಕಾದಷ್ಟಿದೆ ಆದರೆ ಈಗ ಏನು ಮಾಡಬೇಕು? ಜ್ಞಾನದ ಸುಗಂಧ ಅದರಲ್ಲಿರಬೇಕು. ಅರಿವನ್ನು ಜ್ಞಾನದ ಸುಗಂಧದಲ್ಲಿಡಬೇಕು. ಆಗಲೇ ಬಾಪ್ ದಾದಾ ಇಟ್ಟುಕೊಂಡಿರುವ ಭರವಸೆಗಳನ್ನು ಪ್ರತ್ಯಕ್ಷ ಮಾಡಿ ತೋರಿಸುವಿರಿ. ಜ್ಞಾನದ ಸಾರ ಏನೆಂದು ತಿಳಿದಿರುವಿರಲ್ಲವೇ? ಆದ್ದರಿಂದ ಈ ಜ್ಞಾನದ ಮುಖ್ಯ ವಿಷಯಗಳನ್ನು ಧಾರಣೆ ಮಾಡಿದರೆ ಎಲ್ಲಾ ಅವಶ್ಯಕತೆಗಳು ಪೂರ್ಣವಾಗುತ್ತವೆ. ಈಗ ಒಂದಲ್ಲ ಒಂದು ಆವಶ್ಯಕತೆಗಳಿವೆ. ಆದರೆ ಆವಶ್ಯಕತೆಗಳನ್ನು ಸದಾ ಕಾಲಕ್ಕೂ ಪೂರ್ಣ ಮಾಡಲು ಮೊದಲೇ ಹೇಳಿದಂತೆ ಎರಡು ಆವಶ್ಯಕ ಮಾತುಗಳಾದ ಆಕಾರಿ ಮತ್ತು ಅಲಂಕಾರಿಯಾಗಬೇಕು. ಆಕಾರಿ ಮತ್ತು ಅಲಂಕಾರಿಯಾಗಲು ಕೇವಲ ಒಂದು ಶಬ್ದ ಧಾರಣೆ ಮಾಡಬೇಕು. ಅದರಲ್ಲಿ ಈ ಎರಡೂ ಬರುತ್ತವೆ, ಆ ಶಬ್ದ ಯಾವುದಾಗಿದೆ? ಆ ಒಂದು ಶಬ್ದವಾಗಿದೆ **ಲೈಟ್, ಲೈಟ್ ನ ಒಂದು ಅರ್ಥವಾಗಿದೆ ಜ್ಯೋತಿ ಮತ್ತು ಇನ್ನೊಂದು ಅರ್ಥ ಹಗುರತೆ. ಹಗುರ ಮತ್ತು ಪ್ರಕಾಶಮಯ. ಅಲಂಕಾರಿ ಮತ್ತು ಆಕಾರಿ. ಜ್ಯೋತಿ ಸ್ವರೂಪ ಹಾಗೂ ಜ್ವಾಲಾ ಸ್ವರೂಪ. ಆದ್ದರಿಂದ ಒಂದೇ ಲೈಟ್ ಶಬ್ದದಲ್ಲಿ ಎರಡೂ ಮಾತುಗಳು ಬಂದವು. ಇದರಲ್ಲಿ ಕರ್ತವ್ಯವೂ ಬರುತ್ತದೆ. ಕರ್ತವ್ಯ ಏನಾಗಿದೆ? ಲೈಟ್ ಹೌಸ್ ಆಗುವುದು. ಲೈಟ್ ನಲ್ಲಿ ಸ್ವರೂಪವೂ ಬರುತ್ತದೆ ಮತ್ತು ಕರ್ತವ್ಯವೂ ಬರುತ್ತದೆ.**

**ಪ್ರತಿಯೊಬ್ಬ ಶಿಕ್ಷಕಿಗೂ ಬಾಪ್ ದಾದಾರಿಂದ ವ್ಯಕ್ತಿಗತವಾಗಿ ಜ್ಞಾನರತ್ನಗಳ ಉಡುಗೊರೆ ಸಿಕ್ಕಿತು.**

ತಿಲಕವನ್ನು ಏಕೆ ಹಚ್ಚಲಾಗುತ್ತದೆ? ತಿಲಕವನ್ನು ಮಸ್ತಕದಲ್ಲಿಯೇ ಹಚ್ಚಲಾಗುತ್ತದೆ, ಅದೇ ರೀತಿ ಈ ತಿಲಕವನ್ನು ಹಚ್ಚಿಕೊಳ್ಳುವುದು ಎಂದರೆ ಬಿಂದು ಸ್ವರೂಪದಲ್ಲಿರುವುದು, ಅದನ್ನು ಸದಾ ಹಚ್ಚಿಕೊಂಡಿರಬೇಕು. ಎರಡನೆಯದು ಭವಿಷ್ಯದ ರಾಜ್ಯತಿಲಕ, ಇದೂ ತಿಲಕವೇ ಆಗಿದೆ. ಇವೆರಡರ ಸ್ಮೃತಿಯಿರಲಿ. ಅದರ ಚಿಹ್ನೆ ಈ ತಿಲಕವಾಗಿದೆ. ಚಿಹ್ನೆಯನ್ನು ನೋಡಿ ನಶೆಯಿರಲಿ. ಈ ಚಿಹ್ನೆಯನ್ನು ಸದಾ ಕಾಲಕ್ಕಾಗಿ ಕೊಡಲಾಗುತ್ತದೆ. ಮೊದಲೇ ಹೇಳಿದಂತೆ ಬಿಂದು, ಅದರಂತೆ ಈ ತಿಲಕವೂ ಬಿಂದುವಾಗಿದೆ. ಸಂಕ್ಷಿಪ್ತಗೊಳಿಸಲು ಮತ್ತು ಅಳವಡಿಸಿಕೊಳ್ಳಲು ಬರುತ್ತದೆಯೇ? ಇದು ಜಾದೂಗರಿಯ ಕೆಲಸವಾಗಿದೆ. ಜಾದೂಗಾರರು ಯಾವುದೇ ವಸ್ತುವನ್ನು ಸಂಕ್ಷಿಪ್ತಗೊಳಿಸಿ ತೋರಿಸುತ್ತಾರೆ, ಸಮಾವೇಶಗೊಳಿಸಿ ತೋರಿಸುತ್ತಾರೆ. ಎಷ್ಟು ದೊಡ್ಡ ವಸ್ತುವನ್ನು ಚಿಕ್ಕದರಲ್ಲಿ ಅಳವಡಿಸಿ ತೋರಿಸುತ್ತಾರೆ. ಇದೇ ಜಾದೂ ಕಲಿಯಬೇಕಾಗಿದೆ. ಇದನ್ನು ಅಭ್ಯಾಸ ಮಾಡಿ. ವಿಸ್ತಾರದಲ್ಲಿ ಹೋಗಿ ಅಲ್ಲಿಯೇ ಸಮಾವೇಶಗೊಳಿಸುವ ಪುರುಷಾರ್ಥ ಮಾಡಿ. ಬಹಳ ವಿಸ್ತಾರದಲ್ಲಿ ಬುದ್ಧಿ ಹೋದ ಸಮಯದಲ್ಲಿ ಈ ಅಭ್ಯಾಸ ಮಾಡಿ. ಇಷ್ಟೊಂದು ವಿಸ್ತಾರವನ್ನು ಅಳವಡಿಸಿಕೊಳ್ಳಲು ಬಂದಾಗ ನೀವು ತಂದೆಯ ಸಮಾನ ಆಗುತ್ತೀರಿ. ತಂದೆಗೆ ಜಾದೂಗಾರ ಎಂದು ಕರೆಯುತ್ತಾರಲ್ಲವೇ, ಹಾಗಾದರೆ ಮಕ್ಕಳು ಏನಾಗಿದ್ದಾರೆ? ಶೀತಲ ಸ್ವರೂಪ ಮತ್ತು ಜ್ಯೋತಿ ಸ್ವರೂಪಗಳಲ್ಲಿ ಸ್ಥಿತರಾಗಲು ಬರುತ್ತದೆಯೇ? ಈಗೀಗ ಜ್ಯೋತಿ ಸ್ವರೂಪ,

ಈಗೀಗಲೇ ಶೀತಲ ಸ್ವರೂಪ. ಎರಡೂ ಸ್ವರೂಪದಲ್ಲಿ ಸ್ಥಿತರಾಗಲು ಯಾವಾಗ ಬರುತ್ತದೆಯೋ ಆಗ ಏಕರಸ ಸ್ಥಿತಿಯಾಗುವುದು. ಎರಡರ ಸಮಾನತೆಯಿರುವುದೇ ವರ್ತಮಾನದ ಪುರುಷಾರ್ಥವಾಗಿದೆ.

ಈ ಹೂವನ್ನು ಏಕೆ ಕೊಡುತ್ತಿದ್ದೇವೆ? ಅನೇಕ ಜನ್ಮಗಳಲ್ಲಿ ತಂದೆಯ ಪೂಜೆಯನ್ನು ಮಾಡಿದುದರ ರಿಟರ್ನ್ ಆಗಿ ಒಂದು ಜನ್ಮದಲ್ಲಿ ಬಾಪ್ ದಾದಾ ಕೊಡುತ್ತಾರೆ. ಯಾರು ಅತೀತ(ನಿರ್ಲಿಪ್ತ) ರಾಗಿರುತ್ತಾರೋ ಅವರೇ ಅತಿ ಪ್ರಿಯರಾಗಿರುತ್ತಾರೆ. ಸರ್ವ ಮಾತುಗಳಿಂದ ಎಷ್ಟು ಅತೀತರಾಗುವಿರೋ ಅಷ್ಟು ಎಲ್ಲರಿಗೂ ಪ್ರಿಯರಾಗುವಿರಿ. ಎಷ್ಟು ಅತೀತರೋ ಅಷ್ಟೇ ಪ್ರಿಯರು. ಯಾರು ಈ ರೀತಿ ಅತೀತ ಹಾಗೂ ಪ್ರಿಯರೋ ಅವರಿಗೆ ಬಾಪ್ ದಾದಾರ ಆಸರೆ ಸಿಗುತ್ತದೆ. ಅತೀತರಾಗುವುದು ಎಂದರೆ ಪ್ರಿಯರಾಗುವುದು. ಒಂದು ವೇಳೆ ಯಾವುದೇ ಆತ್ಮನಿಗೆ ಪ್ರಿಯರಾಗದಿರುವುದಕ್ಕೆ ಕಾರಣವಾಗಿದೆ ಆ ಆತ್ಮನ ಸಂಸ್ಕಾರ ಮತ್ತು ಸ್ವಭಾವದಿಂದ ನಿರ್ಲಿಪ್ತರಾಗಿಲ್ಲ. ಎಷ್ಟು ಯಾರಿಗೆ ನಿರ್ಲಿಪ್ತತೆಯ ಅನುಭವವಾಗುವುದೋ ಅಷ್ಟು ಸ್ವತಃ ಪ್ರಿಯರಾಗುವಿರಿ. ಪ್ರಿಯರಾಗುವ ಪುರುಷಾರ್ಥವಲ್ಲ, ನಿರ್ಲಿಪ್ತರಾಗುವ ಪುರುಷಾರ್ಥವನ್ನು ಮಾಡಬೇಕು. ನಿರ್ಲಿಪ್ತರಾಗುವ ಪ್ರಾಲಬ್ಧವಾಗಿದೆ ಪ್ರಿಯರಾಗುವುದು. ಇದು. ಈಗಿನ ಪ್ರಾಲಬ್ಧವಾಗಿದೆ. ಹೇಗೆ ತಂದೆ ಎಲ್ಲರಿಗೂ ಪ್ರಿಯರಾಗಿದ್ದಾರೆಯೋ ಹಾಗೆ ಮಕ್ಕಳು ಇಡೀ ಜಗತ್ತಿನ ಆತ್ಮರಿಗೆ ಪ್ರಿಯರಾಗಬೇಕು. ಅದರ ಪುರುಷಾರ್ಥವಾಗಿದೆ ಅವರ ನಡೆನುಡಿಯಲ್ಲಿ ಅತೀತತೆ ಎಂಬುದನ್ನು ಕೇಳಿದಿರಿ. ಆದ್ದರಿಂದ ಜಗತ್ತಿನಿಂದ ಅತೀತ ಮತ್ತು ಜಗತ್ತಿಗೆ ಪ್ರಿಯರಾಗಲು ಈ ಪುಷ್ಪವನ್ನು ಕೊಡಲಾಗಿದೆ. ಈ ಗುಂಪಿನಲ್ಲಿ ಹರ್ಷಿತತೆಯಿದೆ ಆದರೆ ಈಗ ಇದಕ್ಕೆ ಏನನ್ನು ಜೋಡಿಸಬೇಕು? ಆಕರ್ಷಣಾ ಮೂರ್ತಿಯಾಗಬೇಕು, ಅವರೇ ಆಕಾರಿ ಮೂರ್ತಿಗಳಾಗುವಿರಿ. ತಂದೆ ಆಕಾರಿಯಾಗಿದ್ದರೂ ಆಕರ್ಷಣಾ ಮೂರ್ತಿಗಳಾಗಿದ್ದರಲ್ಲವೇ? ಎಷ್ಟೆಷ್ಟು ಆಕಾರಿಯೋ ಅಷ್ಟಷ್ಟು ಆಕರ್ಷಣೆ. ಹೇಗೆ ಆ ಜನ ಪೃಥ್ವಿಯಿಂದ ದೂರ ಆಕಾಶದೆಡೆಗೆ ಹೋಗುತ್ತಾರೆ, ಆಗ ಪೃಥ್ವಿಯ ಆಕರ್ಷಣೆಯಿಂದ ದೂರ ಹೋಗುತ್ತಾರೆ. ನೀವು ಹಳೆಯ ಜಗತ್ತಿನ ಆಕರ್ಷಣೆಯಿಂದ ಅತೀತವಾದಾಗ, ಇಚ್ಛೆಯಿಲ್ಲದಿದ್ದರೂ ಆಕರ್ಷಣಾ ಮೂರ್ತಿಯಾಗುತ್ತೀರಿ. ಸಾಕಾರದಲ್ಲಿರುತ್ತಿದ್ದರೂ ಎಲ್ಲರನ್ನೂ ಆಕಾರಿಯಾಗಿ ನೋಡಬೇಕು. ಸೇವೆಯ ಬಲವೂ ಸಾಕಷ್ಟು ಸಿಗುತ್ತದೆ. ಒಂದು ತಮ್ಮ ಪುರುಷಾರ್ಥದ ಬಲ ಮತ್ತೊಂದು ಬೇರೆಯವರ ಸೇವೆ ಮಾಡುವುದರಿಂದಲೂ ಬಲ ಸಿಗುತ್ತದೆ. ಆದ್ದರಿಂದ ಎರಡೂ ಬಲ ಪ್ರಾಪ್ತಿಯಾಗುತ್ತವೆ. ಬಾಪ್ ದಾದಾರ ಸ್ನೇಹ ಹೇಗೆ ಸಿಗುತ್ತದೆ ಗೊತ್ತಿದೆಯಾ? ಎಷ್ಟೆಷ್ಟು ತಂದೆಯ ಕರ್ತವ್ಯದಲ್ಲಿ ಸಹಯೋಗಿಯಾಗುವಿರೋ ಅಷ್ಟು ಸ್ನೇಹ, ಕರ್ತವ್ಯದ ಸಹಯೋಗದಿಂದ ಸ್ನೇಹ ಸಿಗುವ ಅನುಭವವಿದೆಯಾ? ಯಾವ ದಿನ ಕರ್ತವ್ಯದಲ್ಲಿ ಹೆಚ್ಚು ಸಹಯೋಗಿಯಾಗುವಿರೋ ಆ ದಿನ ಅಧಿಕ ಸ್ನೇಹದ ವಿಶೇಷ ಅನುಭವವಾಗುವುದು. ಸದಾ ಸಹಯೋಗಿ ಸದಾ ಸ್ನೇಹಿ. ಸ್ವಮಾನ ಹೇಗೆ ಸಿಗುತ್ತದೆ? ಎಷ್ಟು ನಿರ್ಮಾನವೋ ಅಷ್ಟು ಸ್ವಮಾನ ಮತ್ತು ಎಷ್ಟೆಷ್ಟು ಬಾಪ್ ದಾದಾರ ಸಮಾನವೋ ಅಷ್ಟು ಸ್ವಮಾನ. ನಿರ್ಮಾನವೂ ಆಗಬೇಕು, ಸಮಾನವೂ ಆಗಬೇಕು. ಇದೇ ರೀತಿ ಪುರುಷಾರ್ಥ ಮಾಡಬೇಕು. ನಿರ್ಮಾನತೆಯಲ್ಲಿ ಕಡಿಮೆಯಿಲ್ಲದಿದ್ದಾಗ ಸಮಾನತೆಯಲ್ಲಿಯೂ ಕಡಿಮೆ ಇರುವುದಿಲ್ಲ. ನಿರ್ಮಾನತೆಯಲ್ಲಿ ಮತ್ತು ಸ್ವಮಾನದಲ್ಲಿಯೂ ಲೋಪವಿರಬಾರದು. ತಮ್ಮ ಸ್ವಮಾನವನ್ನು ಸಮಾನತೆಯಿಂದ ಪರಿಶೀಲಿಸಿಕೊಳ್ಳಬಹುದು.

ತಮ್ಮಿಂದ ಬಾಪ್ ದಾದಾರ ಸಾಕ್ಷಾತ್ಕಾರ ಮಾಡಿಸಲು ಏನನ್ನು ಮಾಡಬೇಕು? ಯಾವುದೇ ವಸ್ತುವಿನ ಸಾಕ್ಷಾತ್ಕಾರ ಯಾವುದರಲ್ಲಿ ಆಗುತ್ತದೆ? ಕನ್ನಡಿಯಲ್ಲಿ. ಹಾಗಾದರೆ ತಮ್ಮನ್ನು ಕನ್ನಡಿಯನ್ನಾಗಿ ಮಾಡಿಕೊಳ್ಳಬೇಕು. ಸಂಪೂರ್ಣವಾದಾಗ ಕನ್ನಡಿಯಾಗುವಿರಿ. ಸಂಪೂರ್ಣ ಅರ್ಪಣೆಯಾದಾಗ ಸ್ಪಷ್ಟ ಸಾಕ್ಷಾತ್ಕಾರವಾಗುವಂತಹ ಶ್ರೇಷ್ಠ ದರ್ಪಣವಾಗುವಿರಿ. ಒಂದು ವೇಳೆ ಯಥಾಯೋಗ್ಯ, ಯಥಾಶಕ್ತಿ ಅರ್ಪಣೆಯಾಗಿದ್ದರೆ ದರ್ಪಣವೂ ಯಥಾಯೋಗ್ಯ, ಯಥಾಶಕ್ತಿಯಾಗಿರುವುದು. ಸಂಪೂರ್ಣ ಎಂದರೆ ಸ್ವಯಂನ ಭಾವನೆಯಿಂದಲೂ ಅರ್ಪಣೆ.

ಬಾಪ್ ದಾದಾರ ಸಾಕ್ಷಾತ್ಕಾರ ಮಾಡುವುದೇ ಕುಮಾರಿಯರ ವಿಶೇಷ ಕರ್ತವ್ಯವಾಗಿದೆ. ಕೇವಲ ವಾಣಿಯಿಂದಲ್ಲ ಆದರೆ ತಮ್ಮ ಮುಖದಿಂದ, ಸಾಕಾರದಲ್ಲಿ ತಂದೆಯ ವಿಶೇಷತೆಗಳನ್ನು ತಮ್ಮಲ್ಲಿ ತರಬೇಕು. ವಿಶೇಷ ಗುಂಪು ಇದಾಗಿದೆ. ಸಾಕಾರದಲ್ಲಿ

ಗೆದ್ದವರೇ ಅರ್ಜುನ ಸಮಾನ "ಅಲ್ಲಾ" ಎಂದು ಹೇಳುತ್ತಿದ್ದರು. ಈ ಗುಂಪಿಗೆ ಹಾಗೆಯೇ ಆಗಬೇಕು. ಮಸ್ತಕದಲ್ಲಿ ಈ ತಿಲಕ ಹೊಳೆಯುವ ಹಾಗೆ ಈ ಸೃಷ್ಟಿಯಲ್ಲಿ ಸ್ವಯಂನ್ನು ಹೊಳೆಯುವಂತೆ ತಯಾರಾಗಿ ತೋರಿಸುವಂತಹ ಗುರಿಯನ್ನು ಇಟ್ಟುಕೊಳ್ಳಬೇಕು. ಸೇವೆಯಲ್ಲಿ ಸಹಯೋಗಿಯಾಗಿರುವ ಕಾರಣ ಬಾಪ್ ದಾದಾರ ವಿಶೇಷ ಸ್ನೇಹವೂ ಇದೆ. ಸಹಯೋಗ ಮತ್ತು ಸ್ನೇಹದ ಜೊತೆ ಈಗ ಶಕ್ತಿಯನ್ನು ತುಂಬಿಕೊಳ್ಳಬೇಕು. ಈಗ ಶಕ್ತಿರೂಪವಾಗಬೇಕು. ಶಕ್ತಿಗಳಲ್ಲಿ ವಿಶೇಷ ಯಾವ ಶಕ್ತಿಯನ್ನು ತುಂಬಿಕೊಳ್ಳಬೇಕು? ಸಹನಶಕ್ತಿ. ಯಾರಲ್ಲಿ ಸಹನಶಕ್ತಿಯ ಕೊರತೆಯಿದೆಯೋ ಅವರಲ್ಲಿ ಸಂಪೂರ್ಣತೆಯೂ ಕಡಿಮೆ. ವಿಶೇಷ ಈ ಶಕ್ತಿಯನ್ನು ಧಾರಣೆ ಮಾಡಿಕೊಂಡು ಶಕ್ತಿ ಸ್ವರೂಪವಾಗಬೇಕು. ನಿರ್ಭಯತೆ ಮತ್ತು ಸಂತುಷ್ಟತೆಗಳು ತೃಪ್ತ ಆತ್ಮನ ವಿಶೇಷ ಗುಣಗಳಾಗಿವೆ. ಯಾರು ಸ್ವಯಂ ಸಂತುಷ್ಟರಾಗಿರುವರೋ ಮತ್ತು ಬೇರೆಯವರನ್ನು ಸಂತುಷ್ಟರಾಗಿಡುವರೋ ಅವರಲ್ಲಿ ಎಲ್ಲಾ ಗುಣಗಳು ಬರುತ್ತವೆ. ಎಷ್ಟು ಶಕ್ತಿ ಸ್ವರೂಪರಾಗುವಿರೋ ಅಷ್ಟು ದುರ್ಬಲತೆ ಎದುರಿಗೆ ನಿಲ್ಲುವುದಿಲ್ಲ. ಆದ್ದರಿಂದ ಶಕ್ತಿರೂಪರಾಗಿ ಹೋಗಿ. ಬ್ರಹ್ಮಾಕುಮಾರಿಯೂ ಅಲ್ಲ, ಏಕೆಂದರೆ ಕುಮಾರಿ ರೂಪದಲ್ಲಿ ಅಲ್ಲಲ್ಲಿ ದುರ್ಬಲತೆ ಬರುತ್ತದೆ. ಶಕ್ತಿರೂಪದಲ್ಲಿ ಸಂಹಾರದ ಶಕ್ತಿಯಿದೆ. ಶಕ್ತಿ ಸದಾ ವಿಜಯಿ. ಶಕ್ತಿಯರ ಕೊರಳಲ್ಲಿ ಸದಾ ವಿಜಯದ ಮಾಲೆಯಿರುತ್ತದೆ. ಶಕ್ತಿರೂಪದ ವಿಸ್ಮೃತಿಯಿಂದ ವಿಜಯವು ದೂರವಾಗುತ್ತದೆ. ಆದ್ದರಿಂದ ಸದಾ ತಮ್ಮನ್ನು ಶಕ್ತಿ ಎಂದು ತಿಳಿಯಿರಿ.

ಮಕ್ಕಳು ತಂದೆಗಿಂತ ದೊಡ್ಡ ಜಾದೂಗಾರ ಆಗಿದ್ದಾರೆ ಏಕೆಂದರೆ ತಂದೆಯನ್ನು ಹೇಗೆ ಬೇಕಾದರೆ ಹಾಗೆ ತಯಾರು ಮಾಡಿಕೊಳ್ಳುತ್ತೀರಿ. "ಏನನ್ನು ಬಯಸುತ್ತಾರೆಯೋ ಅದನ್ನು ಮಾಡಬಲ್ಲರು" ಎಂದು ತಂದೆಗೆ ಗಾಯನವಿದೆ ಆದರೆ ಅವರನ್ನು ಹೇಗೆ ಬೇಕೋ ಹಾಗೆ ತಯಾರು ಮಾಡಿಕೊಳ್ಳಬಹುದಾದವರು ಯಾರು? ಮಕ್ಕಳು. ಅವ್ಯಕ್ತರಾದರೂ ವ್ಯಕ್ತದಲ್ಲಿ ತರುವುದನ್ನು ಜಾದೂ ಎಂದು ಹೇಳಬಹುದೇ? ಅವ್ಯಕ್ತರಾಗುವ ದಿನಗಳು ಸಮೀಪ ಇವೆ ಆದ್ದರಿಂದ ಅವ್ಯಕ್ತರ ಲಿಫ್ಟ್ ಸಿಕ್ಕಿದೆ. ಜ್ಞಾನಮೂರ್ತಿ ಮತ್ತು ಗುಣಮೂರ್ತಿ ಎರಡರಲ್ಲಿಯೂ ಸಮಾನರಾಗಬೇಕು. ಯಾವಾಗ ಬೇಕೋ ಆಗ ಜ್ಞಾನಮೂರ್ತಿ ಮತ್ತು ನೆನಪಿನ ಮೂರ್ತಿಯಾಗಬೇಕು. ಯಾರು ಎಷ್ಟು ನೆನಪಿನ ಮೂರ್ತಿಯೋ ಅಷ್ಟು ಅವರು ಬೇರೆಯವರಿಗೆ ತಂದೆಯ ನೆನಪನ್ನು ಕೊಡಿಸುತ್ತಾರೆ. ನೆನಪಿನ ಮೂರ್ತಿಯಾಗಿ ಎಲ್ಲರಿಗೂ ನೆನಪನ್ನು ಕೊಡಬೇಕು. ಸಮಯಕ್ಕಾಗಿ ಕಾಯುತ್ತೀರೋ ಅಥವಾ ಸಮಯ ನಿಮಗಾಗಿ ಕಾಯುತ್ತದೆಯೋ? ಸಮಯಕ್ಕಾಗಿ ತಾವು ಕಾಯಬಾರದು. ಯಾವಾಗಲಾದರೂ ಸಮಯ ಬರಲಿ, ತಮ್ಮನ್ನು ತಾವು ಸದಾ ಸಿದ್ಧರನ್ನಾಗಿ ಇಟ್ಟುಕೊಳ್ಳಬೇಕು. ಕಾಯುವುದನ್ನು ಸಮಾಪ್ತಿ ಮಾಡಿ ತಯಾರು ಇಟ್ಟುಕೊಳ್ಳಬೇಕು. ತಮ್ಮ ತಯಾರಿ ಪೂರ್ಣವಾದಾಗ ಕಾಯುವ ಅವಶ್ಯಕತೆಯಿರುವುದಿಲ್ಲ. ಅವರನ್ನೇ ಸದಾಸಿದ್ಧ (ಎವರೆಡಿ) ಎಂದು ಹೇಳಲಾಗುತ್ತದೆ . ಎಲ್ಲದರಲ್ಲಿಯೂ ಸಿದ್ಧ. ಕೇವಲ ಸೇವೆಯಲ್ಲಿ ಅಲ್ಲ, ಪುರುಷಾರ್ಥದಲ್ಲಿಯೂ ಸದಾಸಿದ್ಧ. ಸಂಸ್ಕಾರಗಳನ್ನು ಸಮೀಪ ತರುವಲ್ಲಿಯೂ ಸದಾಸಿದ್ಧ, ವಿಶೇಷ ಸ್ನೇಹವಿದೆ ಆದ್ದರಿಂದ ತಂದೆ ವಿಶೇಷವಾಗುವ ವಿಷಯಗಳನ್ನು ತಿಳಿಸುತ್ತಿದ್ದಾರೆ. ವೃಕ್ಷದಲ್ಲಿ ನಂತರ ಬರುವಂತಹ ಎಲೆ ಮತ್ತು ಹೂಗಳು ಹೇಗಿರುತ್ತವೆ? ಮೊದಲಿನವು ಹಳೆಯವಾಗುತ್ತವೆ ಮತ್ತು ನಂತರ ಬರುವಂತಹವು ಸುಂದರವಾಗಿರುತ್ತವೆ. ಅದೇ ರೀತಿ ಇವರೂ ನಂತರ ಬಂದಿದ್ದಾರೆ. ಆದರೆ ಬಹಳ ಪ್ರಿಯರಾಗಿದ್ದಾರೆ. ನಂತರದವರು ಬಹಳ ಕೋಮಲವಾಗಿದ್ದಾರೆ. ಕೋಮಲತೆಯಲ್ಲಿ ಏನಿದೆ? ಎಷ್ಟು ಕೋಮಲವೋ ಅಷ್ಟು ಕಠಿಣ ಕೇವಲ ಕೋಮಲವಾದರೆ ಯಾರಾದರೂ ಕಸಿದುಕೊಳ್ಳುತ್ತಾರೆ. ಕೋಮಲರಾಗುವ ಜೊತೆಗೆ ಅದ್ಭುತವಾದುದನ್ನು ಮಾಡಬೇಕು. ಕೋಮಲತೆ ಮತ್ತು ಕಮಾಲ್ ಎರಡೂ ಜೊತೆಗಿದ್ದಾಗ ಅದ್ಭುತವನ್ನು ಮಾಡಿ ತೋರಿಸುವಿರಿ. ಈ ಇಡೀ ಗುಂಪು ಅದ್ಭುತವನ್ನು ಮಾಡಿ ತೋರಿಸುವಂತಹುದು. ಏನಾದರೂ ಮಾಡಿ ತೋರಿಸುವಂತಹ ಗುರಿಯನ್ನು ಇಟ್ಟುಕೊಳ್ಳಬೇಕು. ದೊಡ್ಡವರಂತೂ ದೊಡ್ಡವರೇ ಆದರೆ ಚಿಕ್ಕವರು ಅಲ್ಲಾನ ಸಮಾನರೆಂದು ಆಗ ಹೇಳಲಾಗುತ್ತದೆ. ಹೇಗೆ ಕರ್ಮವನ್ನು ಮಾಡುವಿರೋ ಹಾಗೆ ಹೆಸರು ಬರುವುದು. ಶ್ರೇಷ್ಠ ಕೆಲಸವನ್ನು ಮಾಡಿದರೆ "ಶ್ರೇಷ್ಠಮಣಿ" ಎಂದು ಹೆಸರು ಬರುವುದು ಶ್ರೇಷ್ಠಮಣಿಗೆ ಎಲ್ಲಾ ಕಾರ್ಯಗಳನ್ನು ಶ್ರೇಷ್ಠ ಮಾಡಬೇಕಾಗುತ್ತದೆ. ಮನ, ವಾಣಿ, ಕರ್ಮದಲ್ಲಿ ಸರಳತೆ ಮತ್ತು ಸಹನಶೀಲತೆ ಈ ಎರಡೂ ಅವಶ್ಯಕವಾಗಿವೆ. ಸರಳತೆಯಿದೆ ಆದರೆ ಸಹನಶೀಲತೆ ಇಲ್ಲದಿದ್ದರೆ ಶ್ರೇಷ್ಠವಲ್ಲ. ಆದ್ದರಿಂದ ಸರಳತೆ ಮತ್ತು ಸಹನಶೀಲತೆ ಎರಡೂ ಜೊತೆಜೊತೆಗೆ ಬೇಕು. ಸಹನಶೀಲತೆ ಇಲ್ಲದೇ ಸರಳತೆ ಬಂದರೆ

ಮುಗ್ಧತೆ ಎಂದು ಹೇಳಲಾಗುತ್ತದೆ. ಸರಳತೆಯ ಜೊತೆಗೆ ಸಹನಶೀಲತೆಯಿದ್ದರೆ ಶಕ್ತಿಸ್ವರೂಪ ಎಂದು ಕರೆಯಲಾಗುತ್ತದೆ. ಶಕ್ತಿಯರಲ್ಲಿ ಸರಳತೆ ಮತ್ತು ಸಹನಶೀಲತೆಯ ಗುಣಗಳು ಬೇಕು. ಇಲ್ಲಿಯವರೆಗಿನ ಫಲಿತಾಂಶದಲ್ಲಿ ಕೆಲವು ವೇಳೆ ಸಹನಶೀಲತೆ ಹೆಚ್ಚಿದೆ, ಇನ್ನು ಕೆಲವು ವೇಳೆ ಸರಳತೆ ಹೆಚ್ಚಿದೆ. ಈಗ ಇವೆರಡನ್ನೂ ಸಮಾನ ಮಾಡಬೇಕು. ಮಧುರತೆಯೂ ಬೇಕು. ಶಕ್ತಿರೂಪವೂ ಬೇಕು. ದೇವಿಯರ ಚಿತ್ರದಲ್ಲಿ ಏನನ್ನು ನೋಡುತ್ತಿರಿ? ಎಷ್ಟು ಶೀತಲವೋ ಅಷ್ಟು ಜ್ವಾಲೆ. ಕರ್ತವ್ಯ ಜ್ವಾಲೆಯದು ಆದರೆ ಮುಖ ಶೀತಲತೆಯದು. ಇದಾಗಿದೆ ಅಂತಿಮ ಸ್ವರೂಪ.

ಎಷ್ಟೆಷ್ಟು ತಮ್ಮ ದೇಹದಿಂದ ಅತೀತರಾಗಿರುವಿರೋ ಅಷ್ಟು ಸಮಯ ಮಾತಿನಿಂದಲೂ ಅತೀತ. ವಸ್ತ್ರ ತೆಗೆಯುವುದು ಮತ್ತು ಹಾಕಿಕೊಳ್ಳುವುದು ಸಹಜವೋ ಕಠಿಣವೋ? ಈ ರೀತಿ ಅತೀತರಾದಾಗ ಶರೀರದ ಪರಿವೆಯಲ್ಲಿ ಬರುವುದು ಮತ್ತು ಶರೀರದ ಪರಿವೆಯಿಂದ ಹೊರಗೆ ಬರುವುದು ಸಹ ಹೀಗೆಯೇ ಅನಿಸುವುದು. ಈಗೀಗ ಶರೀರದ ವಸ್ತ್ರ ಧಾರಣೆ ಮಾಡುವುದು, ಈಗೀಗ ತೆಗೆಯುವುದು. ಇಂದು ಈ ವಿಶೇಷ ಮಾತಿನ ಮೇಲೆ ಮುಖ್ಯ ಪುರುಷಾರ್ಥವನ್ನು ಮಾಡಬೇಕು. ಯಾವಾಗ ಈ ಮುಖ್ಯ ಪುರುಷಾರ್ಥ ಮಾಡುವಿರೋ ಆಗ ಮುಖ್ಯ ರತ್ನಗಳಲ್ಲಿ ಬರುವಿರಿ. ತಿಲಕವನ್ನು ಹಚ್ಚುವುದು ಎಷ್ಟು ಸಹಜವೋ ಅಷ್ಟೇ ಬಿಂದುರೂಪ ಆಗುವುದು ಸಹಜವಾಗಿದೆ.

ಬ್ರಾಹ್ಮಣರು ಏನನ್ನು ಕೊಡು-ತೆಗೆದುಕೊಳ್ಳಬೇಕು? ಸ್ನೇಹವನ್ನು ಕೊಡುವುದು ಮತ್ತು ಸ್ನೇಹವನ್ನು ಪಡೆಯುವುದು. ಸ್ನೇಹ ಕೊಡುವುದರಿಂದ ಸ್ನೇಹ ಸಿಗುತ್ತದೆ. ಸ್ನೇಹವನ್ನು ಕೊಡುವ ಮತ್ತು ತೆಗೆದುಕೊಳ್ಳುವುದರಿಂದ ತಂದೆಯ ಸ್ನೇಹವನ್ನು ಪಡೆಯುತ್ತಾರೆ ಮತ್ತು ಈ ರೀತಿಯ ಸ್ನೇಹಿ ಸಮೀಪವಾಗುತ್ತಾರೆ. ಸ್ನೇಹವಿರುವವರು ದೂರವಿದ್ದರೂ ಸಮೀಪವೇ ಇದ್ದಂತೆ. ಬಾಪ್ ದಾದಾರ ಸಮೀಪ ಬರಲು ಸ್ನೇಹವನ್ನು ಕೊಟ್ಟು-ತೆಗೆದುಕೊಳ್ಳುವದನ್ನು ಮಾಡಿ ಸಮೀಪ ಬರಬೇಕು. ಈ ಕೊಡುವ – ತೆಗೆದುಕೊಳ್ಳುವುದರಲ್ಲಿ ಹಗಲು ರಾತ್ರಿಯನ್ನು ಕಳೆಯಬೇಕು. ಇದೇ ಬ್ರಾಹ್ಮಣರ ಕರ್ತವ್ಯವಾಗಿದೆ, ಬ್ರಾಹ್ಮಣರ ಲಕ್ಷಣವಾಗಿದೆ. ಸ್ನೇಹಿಯಾಗಲು ಏನು ಮಾಡಬೇಕು? ಯಾರು ಎಷ್ಟು ವಿದೇಹಿಯಾಗುವರೋ ಅವರು ಅಷ್ಟು ಸ್ನೇಹಿಯಾಗುವರು. ಆದ್ದರಿಂದ ವಿದೇಹಿಯಾಗುವುದು ಎಂದರೆ ಸ್ನೇಹಿಯಾಗುವುದು ಏಕೆಂದರೆ ತಂದೆ ವಿದೇಹಿಯಾಗಿದ್ದಾರಲ್ಲವೇ? ಅದೇ ರೀತಿ **ದೇಹದಲ್ಲಿರುತ್ತಾ ವಿದೇಹಿಯಾಗಿರುವವರು ಸರ್ವರ ಸ್ನೇಹಿಯಾಗಿರುತ್ತಾರೆ.** ಆದ್ದರಿಂದ ಎಷ್ಟು ವಿದೇಹಿಯಾಗಿರುತ್ತೇವೆ ಎಂದು ನೋಡಿಕೊಳ್ಳಿ. ಇಂತಹ ಶ್ರೇಷ್ಠ ಸೌಭಾಗ್ಯ ಎಂದಾದರೂ ಸ್ವಪ್ನದಲ್ಲಿಯಾದರೂ ಇತ್ತೇ? ಹೇಗೆ ಇದು ಸ್ವಪ್ನದಲ್ಲಿಯೂ, ಸಂಕಲ್ಪದಲ್ಲಿಯೂ ಇರಲಿಲ್ಲವೋ ಹಾಗೆಯೇ ಏನೆಲ್ಲ ದುರ್ಬಲತೆಗಳಿವೆಯೊ ಅವುಗಳ ಸಂಕಲ್ಪವೂ ಸ್ವಪ್ನದಲ್ಲಿರಬಾರದು. ಈ ರೀತಿ ಪುರುಷಾರ್ಥ ಮಾಡಬೇಕು ಈ ದುರ್ಬಲತೆಗಳು ಪೂರ್ವದ ಬಹಳ ಜನ್ಮಗಳವು. ವರ್ತಮಾನ ಜನ್ಮಕ್ಕೆ ಇಂತಹ ದುರ್ಬಲತೆಗಳನ್ನು ದೂರ ಮಾಡುವ ಗುರಿಯನ್ನಿಟ್ಟುಕೊಳ್ಳಿ. ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಾ? ಸರ್ವಶಕ್ತಿವಂತನ ಮಕ್ಕಳು ಎಂದರೆ ಸರ್ವಶಕ್ತಿವಂತರು, ನಾನು ಇದನ್ನು ಮಾಡಲಾರೆ ಎಂದು ಎಂದೂ ಹೇಳಬಾರದು. ಎಲ್ಲವನ್ನೂ ಮಾಡಬಲ್ಲೆ, ಅಸಂಭವವಾದ ಯಾವ ಮಾತೂ ಇಲ್ಲ, ಯಾವುದೇ ಕಠಿಣ ಮಾತೂ ಸಹಜ. ಅವರಿಗೆ ಯಾವುದಾದರೂ ಕಷ್ಟಕರವೇ? ಇಲ್ಲ. ಮಾಸ್ಟರ್ ಸರ್ವಶಕ್ತಿವಂತರಾಗಬೇಕು. ಒಂದು ಶಕ್ತಿಯ ಕೊರತೆಯೂ ಇರಬಾರದು. ಯಾವಾಗ ಒಂಟಿ ಎಂದು ತಿಳಿಯುವಿರೋ ಅಲ್ಲಿ ಜೊತೆ ಎಂದು ತಿಳಿಯಿರಿ. ಎಲ್ಲಿಯಾದರೂ ಒಂಟಿಯಾಗಿ ಕಳಿಸಿದರೆ ತಂದೆ ಜೊತೆಗಿದ್ದಾರೆ ಎಂದು ತಿಳಿಯುವಿರಲ್ಲವೇ? ಶಿವತಂದೆ ಜೊತೆಗಿದ್ದರೆ ಎಲ್ಲಿಯಾದರೂ ಒಂಟಿಯಾಗಿದ್ದರೆ ಹಾಗೆ ಅನಿಸುವುದಿಲ್ಲ. ಒಂಟಿಯಾಗಿದ್ದರೂ ಜೊತೆಯ ಅನುಭವ ಮಾಡಿ ಮತ್ತು ಜೊತೆಗಿದ್ದರೂ ಒಂಟಿ ಎಂದು ತಿಳಿಯಿರಿ, ಈ ಅಭ್ಯಾಸವೂ ಬೇಕು. ಜೊತೆಗೂ ಇರಬೇಕು ಮತ್ತು ಒಂಟಿಯಾಗಿಯೂ ಇರಬೇಕು. ಒಂಟಿ ಎಂದರೆ ಅತೀತ, ಸಂಘಟನೆ ಎಂದರೆ ಪ್ರಿಯ. ಅತೀತರೂ ಹೌದು ಮತ್ತು ಪ್ರಿಯರೂ ಹೌದು. ಎರಡರ ಅಭ್ಯಾಸ ಬೇಕು. ತಂದೆ ಒಂಟಿಯಾಗಿರುತ್ತಾಯೋ ಅಥವಾ ಜೊತೆಗಿರುತ್ತಾರೋ? ಒಂಟಿಯಾಗಿರುವುದೇ ಜೊತೆಗಿರುವುದು. ಹೊರಗಿನ ಒಂಟಿತನ ಮತ್ತು ಒಳಗಡೆಯ ಜೊತೆ, ಹೊರಗಡೆಯ ಜೊತೆಯಿಂದ ಒಂಟಿತನ ಮರೆಯುತ್ತದೆ. ಆದರೆ ಹೊರಗಡೆಯಿಂದ ಒಂಟಿಯಾಗಿರುವುದು ಆದರೆ ಒಳಗಡೆಯಿಂದ ಒಂಟಿಯಾಗಿ ಅಲ್ಲ.

ಎಲ್ಲರಿಗಿಂತ ಶ್ರೇಷ್ಠಮಣಿ ಯಾರಾಗಿದ್ದಾರೆ? ಬಾಪ್ ದಾದಾರವರ ಮಸ್ತಕಮಣಿ ಯಾರಾಗುತ್ತಾರೆ? ಯಾರು ಮಸ್ತಕದಲ್ಲಿ ವಿರಾಜಮಾನವಾದ ಆತ್ಮಿಕ ಸ್ಥಿತಿಯಲ್ಲಿ ಹೆಚ್ಚು ಸಮಯ ಸ್ಥಿತರಾಗಿರುತ್ತಾರೋ ಅವರು. ಮಸ್ತಕ ಮಣಿಗಳು ಕಡಿಮೆಯಿರುತ್ತಾರೆ. ಮಸ್ತಕದಲ್ಲಿ ಕಡಿಮೆ, ಹೃದಯದಲ್ಲಿ ಬಹಳಷ್ಟು ಮಕ್ಕಳು ಇರುತ್ತಾರೆ. ಎಲ್ಲರಿಗಿಂತ ಮೊದಲು ದೃಷ್ಟಿ ಎಲ್ಲಿ ಹೋಗುತ್ತದೆ. ಇಂತಹ ಮಸ್ತಕಮಣಿ ಆಗಬೇಕು. ಯಾರು ಸದಾ ಆಸ್ತಿಕರಾಗಿರುತ್ತಾರೋ ಅವರು ಮಸ್ತಕಮಣಿ ಆಗುತ್ತಾರೆ. ಅವರು ಸದಾ "ಆಗಲಿ" ಎನ್ನುತಾರೆ, ಯಾರು ಆಸ್ತಿಕರಾಗಿದ್ದಾರೋ, ಅವರೇ ಮಸ್ತಕಮಣಿ. ಯಾವುದೇ ಮಾತಿನಲ್ಲಿ "ಇಲ್ಲ" ಎಂಬ ಶಬ್ದ ಸಂಕಲ್ಪದಲ್ಲಿಯೂ ಇರಬಾರದು. ಇಂತಹ ಗುಣದವರು ಮಸ್ತಕದಲ್ಲಿ ಬರುತ್ತಾರೆ. ಗಾಯನ ಯೋಗ್ಯ ಯಾರಾಗುತ್ತಾರೆ ಮತ್ತು ಪೂಜೆಗೆ ಯೋಗ್ಯ ಯಾರಾಗುತ್ತಾರೆ? ಒಂದೇ ಮಾತಿನಿಂದ ಎರಡಕ್ಕೂ ಯೋಗ್ಯರಾಗುತ್ತಾರೆಯೇ ಅಥವಾ ಎರಡಕ್ಕೂ ಎರಡು ವಿಶೇಷ ಮಾತುಗಳಿವೆಯೋ? ಗಾಯನ ಜಾಸ್ತಿಯಿದ್ದು, ಪೂಜೆ ಕಡಿಮೆಯಿರುವಂತಹ ಕೆಲವು ದೇವಿಯರಿದ್ದಾರೆ. ಮತ್ತೆ ಕೆಲವು ದೇವಿಯರಿಗೆ ಎರಡೂ ಆಗುತ್ತದೆ. **ಕೆಲವೊಮ್ಮೆ ಒಂದು ರೀತಿ ಮತ್ತೆ ಕೆಲವೊಮ್ಮೆ ಮತ್ತೊಂದು ರೀತಿ ಇರುವವರ ಪೂಜೆ ಏಕರಸವಾಗಿರುವುದಿಲ್ಲ ಮತ್ತು ಯಾರು ಸದಾ ತಮ್ಮ ಸ್ಥಿತಿಯಲ್ಲಿರುತ್ತಾರೋ ಅವರ ಪೂಜೆ ಸದಾ ಇರುತ್ತದೆ. ಏಕರಸವಾಗಿರುವವರ ಪೂಜೆ ಏಕರಸವಾಗಿರುತ್ತದೆ. ಪುರುಷಾರ್ಥದಲ್ಲಿ ಯಾವಾಗ ಎಂಬ ಶಬ್ದವಿರಬಾರದು. ಯಾವಾಗ ಎಂದು ಹೇಳದೆಯೇ ಈಗ ಎಂದು ಹೇಳುವುದು ತೀವ್ರ ಪುರುಷಾರ್ಥಿಯ ಲಕ್ಷಣವಾಗಿದೆ**. ಯಾರು ಪುರುಷಾರ್ಥದಲ್ಲಿ ಯಾವಾಗ ಎಂದು ಹೇಳುತ್ತಾರೆಯೋ ಅವರ ಪೂಜೆಯೂ ಕಡಿಮೆಯಾಗುತ್ತದೆ. ಆದ್ದರಿಂದ ಯಾವುದೇ ಮಾತಿನಲ್ಲಿ ಯಾವಾಗಲಾದರೂ ನೋಡುತ್ತೇವೆ, ಅಲ್ಲ, ಆದರೆ ಈಗ ತೋರಿಸುತ್ತೇನೆ. ಇವರನ್ನು ತೀವ್ರ ಪುರುಷಾರ್ಥಿ ಎಂದು ಹೇಳಲಾಗುತ್ತದೆ. ಸಂಪೂರ್ಣ ಸ್ಥಿತಿಯಲ್ಲಿ ಸರ್ವಶಕ್ತಿಗಳು ಸಂಪನ್ನವಾಗಿರುತ್ತವೆ. ಸರ್ವಶಕ್ತಿ ಸಂಪನ್ನರಾಗುವುದರಿಂದ ಸರ್ವಗುಣ ಸಂಪನ್ನರಾಗುವಿರಿ. ಭವಿಷ್ಯದಲ್ಲಿ ಸರ್ವಗುಣ ಸಂಪನ್ನ, ಈಗ ಸರ್ವಶಕ್ತಿಸಂಪನ್ನ ಆಗಬೇಕು. ಎಷ್ಟು ಸರ್ವಶಕ್ತಿಸಂಪನ್ನರೋ ಅಷ್ಟು ಸರ್ವಗುಣ ಸಂಪನ್ನರಾಗುವಿರಿ.

ಎಷ್ಟು ಶಕ್ತಿಗಳು ಇವೆ ಗೊತ್ತಿದೆಯೇ? ಯಾವ ಶಕ್ತಿಗಳ ಬಗ್ಗೆ ಹೇಳಿದ್ದೆವು. ಸ್ನೇಹದ ಶಕ್ತಿ ಸಂಬಂಧದ ಶಕ್ತಿ, ಸಹಯೋಗದ ಶಕ್ತಿ, ಸಹನೆಯ ಶಕ್ತಿ. ಈ ನಾಲ್ಕು ಶಕ್ತಿಗಳಿದ್ದರೆ ಸಂಬಂಧ ಸಮೀಪವಾಗಿರುತ್ತದೆ. ನಾಲ್ಕೂ ಸಮಾನವಾಗಿರಬೇಕು. ಹೆಚ್ಚು ಸಾಹಸವಿದೆಯೋ ಅಥವಾ ಸಹನಶಕ್ತಿಯಿದೆಯೋ? ಸಾಹಸವಿದ್ದವರಿಗೆ ಸಹಯೋಗ ಸಿಗುತ್ತದೆ. ಸಹಯೋಗ ಬೇಡುವುದರಿಂದ ಸಿಗುವುದಿಲ್ಲ. ಸಾಹಸ ಇಟ್ಟುಕೊಳ್ಳಬೇಕಾಗುತ್ತದೆ. ಪೂರ್ಣ ಸಾಹಸವಿಟ್ಟುಕೊಂಡರೆ ಬಹಳ ಸಹಯೋಗ ಸಿಗುತ್ತದೆ. ಸಾಹಸವಿದ್ದರೆ ಎಲ್ಲಾ ಮಾತುಗಳಲ್ಲಿ ಸಹಯೋಗವಿದೆ. ಸದಾ ಸಾಹಸಿಗರಾಗಬೇಕು ಆಗ ಬಾಪ್ ದಾದಾ ಮತ್ತು ದೈವಿ ಪರಿವಾರದ ಸಹಯೋಗ ತನ್ನಿಂದ ತಾನೇ ಸಿಗುವುದು. ಸ್ನೇಹಮೂರ್ತಿ, ಶಕ್ತಿಮೂರ್ತಿಗಳಾಗಿದ್ದೀರಾ? ಸ್ನೇಹ ಮತ್ತು ಶಕ್ತಿ ಎರಡರ ಅವಶ್ಯಕತೆಯಿದೆ. **ಶಕ್ತಿರೂಪದಿಂದ ವಿಜಯ ಮತ್ತು ಸ್ನೇಹರೂಪದಿಂದ ಸಂಬಂಧದಲ್ಲಿ ಬರುತ್ತೀರಿ.** ಶಕ್ತಿಯಿಲ್ಲದಿದ್ದರೆ ಮಾಯೆಯ ಮೇಲೆ ವಿಜಯವನ್ನು ಪಡೆಯುವುದಿಲ್ಲ. ಆದ್ದರಿಂದ ಶಕ್ತಿ ರೂಪದಿಂದ ವಿಜಯಿ ಮತ್ತು ಸ್ನೇಹ ರೂಪದಿಂದ ಸಂಬಂಧವೂ ಬೇಕು. ತಂದೆಗೆ ಸರ್ವ ಶಕ್ತಿವಂತ ಮತ್ತು ಪ್ರೀತಿಯ ಸಾಗರ ಎಂದು ಕರೆಯುತ್ತಾರೆ. ಆದ್ದರಿಂದ ಸ್ನೇಹ ಮತ್ತು ಶಕ್ತಿ ಎರಡೂ ಬೇಕು. ಎಷ್ಟು ನಕ್ಷತ್ರಗಳಿರುತ್ತವೆ? ತಾವು ತಮ್ಮನ್ನು ಯಾವ ನಂಬರಿನ ನಕ್ಷತ್ರ ಎಂದು ತಿಳಿದಿದ್ದೀರಿ? ಬಾಪ್ ದಾದಾ ಯಾವ ಹೆಸರನ್ನು ಇಟ್ಟಿರುವರು? ಭಾಗ್ಯಶಾಲೀ ನಕ್ಷತ್ರಗಳು. ತಮ್ಮನ್ನು ಭಾಗ್ಯಶಾಲಿ ಎಂದು ತಿಳಿದಿದ್ದೀರಾ? ತಂದೆಯವರಾದಾಗಿನಿಂದ ಎಲ್ಲರೂ ಭಾಗ್ಯಶಾಲಿ ಆಗಿದ್ದೀರಿ, ಭಾಗ್ಯಶಾಲಿಯಲ್ಲಿ ಕೆಲವರು ಸದಾ ಸಫಲತೆಯ ನಕ್ಷತ್ರಗಳು. ಕೆಲವರು ಸಮೀಪದ ನಕ್ಷತ್ರಗಳು ಕೆಲವರು ಭರವಸೆಯ ನಕ್ಷತ್ರಗಳು. ಯಾರ ನಂಬರ್ ಅವರದೇ ಆಗಿದೆ. ನಾನು ಯಾರಾಗಿದ್ದೇನೆ ಎಂದು ಈಗ ಯೋಚಿಸಬೇಕಾಗಿದೆ. ತಮ್ಮನ್ನು ಸಫಲತೆಯ ನಕ್ಷತ್ರವೆಂದು ತಿಳಿಯಬೇಕು. ಪ್ರತ್ಯಕ್ಷ ಫಲದ ಕಾಮನೆಯನ್ನು ಇಟ್ಟುಕೊಳ್ಳದವರು ಸಫಲತೆಯನ್ನು ಪಡೆಯುತ್ತಾರೆ.

ಅವ್ಯಕ್ತ ಮುರಳಿ 05-04-1970.

***ಸರ್ವ ಪಾಯಿಂಟ್ ಗಳ(ಮಹಾವಾಕ್ಯ) ಸಾರ ಪಾಯಿಂಟ್ (ಬಿಂದು) ಆಗಿ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯಿಂದ ಕೇಳಿರುವ ಮಹಾ ವಾಕ್ಯಗಳ ಸ್ವರೂಪ.

2. ನಾನು ಬೀಜ ರೂಪ ಸ್ಥಿತಿಯಲ್ಲಿದ್ದು ವಿಸ್ತಾರವನ್ನು ಅಳವಡಿಸಿಕೊಳ್ಳುವ ಪುರುಷಾರ್ಥ ಮಾಡಿರುವ ಬಾಪ್ ಸಮಾನ ಸ್ವರೂಪ.

3. ನಾನು ಅಸಂಭವ ವಿಷಯಗಳನ್ನು ಸರಳವಾಗಿ ಮತ್ತು ಸಂಭವ ಮಾಡಿ ಎಲ್ಲರನ್ನೂ ತಂದೆಗೆ ಸಮೀಪವಾಗಿ ತರುವ ಮುಖ್ಯ ಪುರುಷಾರ್ಥ ಮಾಡಿದ್ದೇನೆ.

4. ನಾನು ಎಷ್ಟು ಸಹಜವಾಗಿ ಮಾತಿನಲ್ಲಿ ಬರಬಲ್ಲೆನೋ, ಅಷ್ಟೇ ಸಹಜವಾಗಿ ಮಾತುಗಳಿಂದ ಅತೀತವಾಗಿ ಸಂಪೂರ್ಣ ಸ್ಥಿತಿಗೆ ಸಮೀಪ ತಲುಪಿದ್ದೇನೆ.

5. ನಾನು ಬಾಪ್ ದಾದಾರವರ ಕರ್ತವ್ಯವನ್ನು ಪ್ರತ್ಯಕ್ಷ ಮಾಡುವ ಅಲಂಕಾರಧಾರಿ.

6. ನಾನು ತಂದೆಯ "ಭಾವಿ ಮತ್ತು ಭರವಸೆಯುಳ್ಳ" ಮಗುವಾಗಿದ್ದೇನೆ.

7.ನಾನು ಪುರುಷಾರ್ಥದಿಂದ ಶ್ರೇಷ್ಠವಾಗಿ ತಯಾರಾಗಿದ್ದೇನೆ.

8. ನಾನು ನಿರ್ಭಯತೆಯಿಂದ ವಿಸ್ತಾರವನ್ನು ಒಂದು ಕ್ಷಣದಲ್ಲಿ ಸಮಾವೇಶಗೊಳಿಸಿಕೊಂಡು, ಏಕತೆ ಮತ್ತು ಏಕರಸ ಸ್ಥಿತಿಯಲ್ಲಿದ್ದು ಅನೇಕ ಸಂಸ್ಕಾರಗಳನ್ನು ಒಂದೇ ಶುದ್ಧ ಸಂಸ್ಕಾರದಲ್ಲಿ ಪರಿವರ್ತನೆ ಮಾಡಿಕೊಂಡಿದ್ದೇನೆ.

9. ನಾನು ಕಡಿಮೆ ಸಮಯದಲ್ಲಿ ಸ್ವಲ್ಪ ಮಾತನಾಡಿ ಹೆಚ್ಚಿನ ಸಫಲತೆಯನ್ನು ಹೊಂದಿದ್ದೇನೆ.

10. ನಾನು ಕೇಳಿರುವ ಮಹಾ ವಾಕ್ಯದ ಸ್ವರೂಪವಾಗಿ ತಯಾರಾಗಿರುವ ಸಾಕ್ಷಾತ್ಕಾರ ಮೂರ್ತಿ.

11. ನಾನು ಜ್ಞಾನದ ಸಾರದಲ್ಲಿ ಇರುತ್ತಾ ಬಾಪ್ ದಾದಾರವರ ಕರ್ತವ್ಯವನ್ನು ಪ್ರತ್ಯಕ್ಷ ಮಾಡಿ ಎಲ್ಲರಿಗೂ ಆಕಾರಿ ಮತ್ತು ಅಲಂಕಾರಿಯಾಗಿ ಕಾಣಿಸಿದ್ದೇನೆ.

12. ನಾನು ಲೈಟ್ ಸ್ವರೂಪದಿಂದ ಆಕಾರಿ ಮತ್ತು ಅಲಂಕಾರಿಯಾಗಿ, ಜ್ಞಾನದ ಮುಖ್ಯ ವಿಷಯಗಳನ್ನು ಧಾರಣೆ ಮಾಡಿ ಎಲ್ಲಾ ಅವಶ್ಯಕತೆಗಳನ್ನು ಸದಾಕಾಲಕ್ಕಾಗಿ ಪೂರ್ಣ ಮಾಡಿಕೊಂಡಿದ್ದೇನೆ.

13. ನಾನು ಸಂಗಮ ಯುಗದಲ್ಲಿ ಬಿಂದುಸ್ವರೂಪದ ತಿಲಕಧಾರಿ ಮತ್ತು ಭವಿಷ್ಯದಲ್ಲಿ ರಾಜ್ಯ ತಿಲಕಧಾರಿ.

14. ನಾನು ಶೀತಲತೆ ಮತ್ತು ಜ್ಯೋತಿ ರೂಪದಿಂದ ಏಕರಸವಾಗಿ ತಯಾರಾಗಿದ್ದೇನೆ.

15. ನಾನು ಅತೀತ ಸ್ಥಿತಿಯಿಂದ ವಿಶ್ವಕ್ಕೆ ಪ್ರಿಯವಾಗಿ ತಯಾರಾಗಿದ್ದೇನೆ.

16. ನಾನು ನನ್ನ ಬುದ್ಧಿಯಲ್ಲಿನ ಎಲ್ಲಾ ಆಕರ್ಷಣೆಗಳನ್ನು ತೊಲಗಿಸಿಕೊಂಡಿರುವ ಆಕಾರಿ ಮತ್ತು ಆಕರ್ಷಣಾ ಮೂರ್ತಿ.

17. ನಾನು ನಿರ್ಮಾನದಿಂದ ಬಾಪ್ ದಾದಾರವರ ಸಮಾನವಾದ ಸ್ವಮಾನವನ್ನು ಪಡೆದಿದ್ದೇನೆ.

18. ನಾನು ಸಂಪೂರ್ಣ ಅರ್ಪಣೆಯಿಂದ ದರ್ಪಣದಂತೆ ತಯಾರಾಗಿ ಬಾಪ್ ದಾದಾರವರನ್ನು ಪ್ರತ್ಯಕ್ಷ ಮಾಡಿದ್ದೇನೆ.

19. ನಾನು ಸ್ವಯಂ ನ ಅಭಿಮಾನವನ್ನು ಅರ್ಪಣೆ ಮಾಡಿ ಸಂಪೂರ್ಣ ಸಮರ್ಪಣೆಯಾಗಿದ್ದೇನೆ.

20. ನಾನು ಸಹನೆಯ ಶಕ್ತಿಯನ್ನು ತುಂಬಿಕೊಂಡಿರುವ ಸಂಪೂರ್ಣತಾ ಸ್ವರೂಪ.

21. ನಾನು ದೌರ್ಬಲ್ಯಗಳನ್ನು ಸಂಹರಿಸಿ ಸದಾ ವಿಜಯವನ್ನು ಹೊಂದಿರುವ ಶಕ್ತಿ ಸ್ವರೂಪ.

22. ನಾನು ಜ್ಞಾನಮೂರ್ತಿ ಮತ್ತು ಸ್ಮೃತಿ ಮೂರ್ತಿ.

23. ನಾನು ಸೇವೆಯಲ್ಲಿ, ಪುರುಷಾರ್ಥದಲ್ಲಿ, ಸಂಸ್ಕಾರಗಳನ್ನು ಸಮೀಪ ಮಾಡಿಕೊಳ್ಳುವುದರಲ್ಲಿ ಸದಾ ಸಿದ್ಧ.

24. ನಾನು ಸರಳತೆ, ಸಹನಶೀಲತೆ ಎರಡನ್ನೂ ಸಮಾನವಾಗಿ ಧಾರಣೆ ಮಾಡಿರುವ ಶಕ್ತಿ ಸ್ವರೂಪ.

25. ನಾನು ಎಷ್ಟು ದೂರವಿದ್ದರೂ ಸ್ನೇಹದಿಂದ ತಂದೆಗೆ ಅತಿ ಸಮೀಪವಾಗಿ ಇದ್ದೇನೆ.

26. ನಾನು ವಿದೇಹಿಯಾಗಿ ಸರ್ವರಿಗೂ ಸ್ನೇಹವನ್ನು ಕೊಡು-ತೆಗೆದುಕೊಳ್ಳುವಿಕೆಯಿಂದ ತಂದೆಗೆ ಸಮೀಪವಾಗಿ ಬಂದಿದ್ದೇನೆ.

27. ನಾನು ಒಂಟಿಯಾಗಿದ್ದಾಗ ಸದಾ ತಂದೆಯ ಜೊತೆಯನ್ನು ಅನುಭವ ಮಾಡಿಕೊಂಡಿದ್ದೇನೆ.

28. ನಾನು ಸಂಘಟನೆಯಲ್ಲಿ ಅತೀತ ಮತ್ತು ಅತಿಪ್ರಿಯವಾಗಿ ಇದ್ದೇನೆ.

29. ನಾನು ಮಸ್ತಕದಲ್ಲಿರುವ ಆತ್ಮನ ಸ್ಮೃತಿಯಲ್ಲಿ ಸದಾ ಉಪಸ್ಥಿತವಾಗಿರುವ "ತಂದೆಯ ಮಸ್ತಕದಲ್ಲಿ ಹೊಳೆಯುವ ಮಸ್ತಕ ಮಣಿ".

30. ನನ್ನ ಸ್ಥಿತಿಯನ್ನು ಸದಾ ಏಕರಸವಾಗಿ ಇಟ್ಟುಕೊಂಡು ಸದಾ ಗಾಯನಯೋಗ್ಯವಾಗಿ, ಪೂಜಾಯೋಗ್ಯವಾಗಿ ತಯಾರಾಗಿದ್ದೇನೆ.

31. ನಾನು ಪ್ರತಿ ವಿಷಯದಲ್ಲಿ 'ಯಾವಾಗಲೋ ಅಲ್ಲ ಈಗಲೇ ಮಾಡುವ' ತೀವ್ರ ಪುರುಷಾರ್ಥಿ.

32. ನಾನು ಸರ್ವ ಶಕ್ತಿ ಸಂಪನ್ನವಾದ ಸರ್ವಗುಣಸಂಪನ್ನ ಸ್ವರೂಪ.

33. ನಾನು ಪೂರ್ತಿ ಧೈರ್ಯದಿಂದ ಸರ್ವ ವಿಷಯಗಳಲ್ಲಿ ತಂದೆ ಮತ್ತು ದೈವೀ ಪರಿವಾರದ ಸಹಾಯವನ್ನು ಪಡೆದಿದ್ದೇನೆ.

34. ನಾನು ಶಕ್ತಿ ರೂಪದಿಂದ ಮಾಯೆಯ ಮೇಲೆ ವಿಜಯ ಮತ್ತು ಸ್ನೇಹ ರೂಪದಿಂದ ಸಂಬಂಧಗಳನ್ನು ಶ್ರೇಷ್ಠವಾಗಿ ತಯಾರು ಮಾಡಿಕೊಂಡಿದ್ದೇನೆ.

35. ನಾನು ಪ್ರತ್ಯಕ್ಷ ಫಲದ ಕಾಮನೆ ಇಲ್ಲದ ಸಫಲತಾ ಮೂರ್ತಿ.